ಟ್ಯಾಕ್ಸ್ ಬರದೆ ಸರ್ಕಾರಕ್ಕೆ ಇದರಿಂದ ಬಹಳ ನಷ್ಟವಾಗುತ್ತಿದೆ. KIADB ಯವರು permission ಕೊಟ್ಟರೆ ಮುಗಿದುಹೋಯಿತು. ಹೀಗಾದರೆ ನಮ್ಮ ಪಂಚಾಯತ್ ಅಭಿವೃದ್ಧಿ ಆಗುವುದು ಹೇಗೆ? ನಮ್ಮ ಸರ್ಕಾರವೇ ಎಲ್ಲಾ ಮಾಡಲಿಕ್ಕೆ ಸಾಧ್ಯವೇ? ಅಲ್ಲಿ ಅವರು ಟ್ಯಾಕ್ಸ್ ಕಟ್ಟಿಲ್ಲವೆಂದರೆ ಅವರನ್ನು ನಾವು ಏತಕ್ಕೆ ಅಲ್ಲಿ ಇಟ್ಟುಕೊಳ್ಳಬೇಕು? ನಮ್ಮ ಜಾಗ, ನಮ್ಮ ನೀರು, ನಮ್ಮ ಗಾಳಿ ಬಳಸುತ್ತಾರೆ. ನಮ್ಮವರಿಗೆ ಒಂದು ಉದ್ಯೋಗ ಇಲ್ಲ. ಅಲ್ಲಿನ ರೈತರನ್ನು ಒಕ್ಕಲೆಬ್ಬಿಸುತ್ತಾರೆ, ರೈತರು ಹಾಳಾಗಿಹೋದರು. ಮೂರು ಸಾವಿರ ಎಕರೆಗೆ 18.00 ಲಕ್ಷ ರೂಪಾಯಿಗಳನ್ನು ಫಿಕ್ಸ್ ಮಾಡಿದ್ದಾರೆ. ಇವತ್ತು ಅಲ್ಲಿ Government value 65.00 ಲಕ್ಷ ರೂಪಾಯಿಗಳಿಗೆ ರಿಜಿಸ್ಟ್ರೇಷನ್ ಆಗಿದೆ. ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಜಿಂದಾಲ್‌ನವರು ಜಮೀನನ್ನು ತೆಗೆದುಕೊಂಡಿದ್ದಾರೆ. ಇದನ್ನೆಲ್ಲಾ ಮಂತ್ರಿಗಳು ನೋಡದೆ ಕೇವಲ ದೊಡ್ಡ ದೊಡ್ಡ ಕಂಪನಿಗಳನ್ನು ನೋಡಿಕೊಂಡು ಕುಳಿತರೆ ಯಾವ ರೀತಿ ನಮ್ಮ ರೈತರಿಗೆ ಸಹಾಯ ಮಾಡಿದಂತೆ ಆಗುತ್ತದೆ? ಹಾಗಾಗಿ ದಯಮಾಡಿ ಈ ಬಗ್ಗೆ ಮಂತ್ರಿಗಳು ಸ್ಪಷ್ಟ ಮಾಹಿತಿ ನೀಡಬೇಕು.

ಶ್ರೀ ಮುರುಗೇಶ್ ಆರ್. ನಿರಾಣಿ (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಸದಸ್ಯರು ಚರ್ಚೆ ಮಾಡಿರುವ ವಿಷಯದ ಬಗ್ಗೆ ಹಿರಿಯ ಅಧಿಕಾರಿಗಳನ್ನು ಕರೆದುಕೊಂಡು ಬಂದು ಅವರ ಸಮಸ್ಯೆಯನ್ನು ಪರಿಹಾರ ಮಾಡಿಕೊಡುತ್ತೇನೆ.

11. ವಿಷಯ : ಜಮಖಂಡಿ ತಾಲ್ಲೂಕಿನ ಜಂಬಗಿ ಸೇತುವೆ ಮೂಲಕ ಸಾವಳಗಿ ಹಾಗೂ ತೆಲಸಂಗ (ಅಥಣಿ ತಾಲ್ಲೂಕು) ವರೆಗಿನ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು ಧಾರವಾಡ ರವರು ಸರ್ಕಾರಕ್ಕೆ ಸಲ್ಲಿಸಿದ್ದು ಕೆ.ಆರ್.ಡಿ.ಸಿ.ಎಲ್ ಮುಖಾಂತರ ಕೆಲಸ ಪ್ರಾರಂಭಿಸುವ ಬಗ್ಗೆ.

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ (ಜಮಖಂಡಿ) : ಮಾನ್ಯ ಅಧ್ಯಕ್ಷರೆ, ಜಮಖಂಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿ ಹರಿಯುತ್ತಿದೆ. ಈ ನದಿಗೆ ಜಂಬಗಿ ಹತ್ತಿರ ಒಂದು ಸೇತುವೆ ಆಗಬೇಕೆಂದು ಹೇಳಿ ಮಹಾರಾಷ್ಟ್ರ ಮತ್ತು ಈ ಭಾಗವನ್ನು ನೇರ ಸಂಪರ್ಕ ರಸ್ತೆ ಮಾಡಲು ನೂರಾರು ವರ್ಷಗಳಿಂದ ಬೇಡಿಕೆ ಇತ್ತು. ನಮ್ಮ ಕರ್ನಾಟಕ ಘನ ಸರ್ಕಾರ ಅದಕ್ಕೆ ಮಂಜೂರಾತಿ ನೀಡಿ ಸುಮಾರು 40 ಕೋಟಿ ರೂಪಾಯಿಗಳ ಕೆಲಸ ಶರ ವೇಗದಲ್ಲಿ ನಡೆದಿದೆ. ಬಹುಶಃ ಮಾರ್ಚ್ ಏಪ್ರಿಲ್ ತಿಂಗಳಿನಲ್ಲಿ ಕೆಲಸ ಪೂರ್ಣವಾಗಿ ಆ ಸೇತುವೆ ಲೋಕಾರ್ಪಣೆಯಾಗುತ್ತದೆ. ಆದರೆ ಜಮಖಂಡಿಯಿಂದ ಜಂಬಗಿ, ಜಂಬಗಿ ಯಿಂದ ಸಾವಳಗಿ, ಸಾವಳಗಿಯಿಂದ ಅಥಣಿ ತಾಲ್ಲೂಕಿನ ತೆಲಸಂಗದವರೆಗೆ ಸುಮಾರು 31 ಕಿ.ಮೀ. ವರೆಗೆ ಈ ರಸ್ತೆಯನ್ನು ಯಾವ ರೀತಿ ಬ್ರಿಡ್ಜ್ ಅನ್ನು KRDCL ಗೆ ಕೊಟ್ಟು ಸರ್ಕಾರ ಕಟ್ಟಿಸಿದೆ, ಅದೇ ರೀತಿ ಈ ರಸ್ತೆಯನ್ನು ಮೇಲ್ದರ್ಜೆಗೇರಿಸಿ KRDCL ಮೂಲಕ ಹೊಸ ರಸ್ತೆಯನ್ನು ನಿರ್ಮಾಣ ಮಾಡಿ ಎರಡು state high way ಗಳನ್ನು ಕೂಡಿಸುವಂಥ ವ್ಯವಸ್ಥೆ ಆಗಬೇಕೆಂದು ಹೇಳಿ ಸನ್ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಅಥಣಿ ತಾಲ್ಲೂಕಿನ ಜಮಖಂಡಿಯಿಂದ ಸಾವಳಗಿ ಮೂಲಕ ತೆಲಸಂಗ ರಸ್ತೆಯು 31.20 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆ ಯಾಗಿದ್ದು ಸದರಿ ರಸ್ತೆಯಲ್ಲಿ ಜಂಬಗಿ ಬಳಿ ಒಂದು ಸೇತುವೆಯನ್ನು KRDCL ವಸತಿಯಿಂದ 40 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾ ಗುತ್ತಿದೆ. ಸದರಿ ರಸ್ತೆಯನ್ನು ಕರ್ನಾಟಕ ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆ ಗೇರಿಸುವ ಕುರಿತು ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸ ಲಾಗುತ್ತಿದೆ. ರಸ್ತೆ ಅಭಿವೃದ್ಧಿ ಬಗ್ಗೆ KRDCL ಅನುದಾನದ ಲಭ್ಯತೆಯನ್ನಾ ಧರಿಸಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಮೂರು ತಿಂಗಳಲ್ಲಿ ಸೇತುವೆ ಕಾಮಗಾರಿ ಮುಗಿಯುತ್ತಿರುವುದರಿಂದ ಈ ರಸ್ತೆಯಾಗಬೇಕೆಂಬ ವಿಚಾರವಿದೆ.

ರಸ್ತೆಯನ್ನು ಮೇಲ್ದರ್ಜೆಗೇರಿಸಬೇಕಾದಾಗ ಒಂದು ಸಮಿತಿಯಿದ್ದು, ಸಮಿತಿಯಲ್ಲಿ ಹೋಗಿ ಅದು ಆಗಬೇಕಾದ ಅವಶ್ಯಕತೆಯಿದೆ. ಏಕೆಂದರೆ ಮೇಲ್ದರ್ಜೆಗೇರಿಸಬೇಕಾದಾಗ ಜಿಲ್ಲಾ ಮುಖ್ಯ ರಸ್ತೆಯಿಂದ State Highway ಯಾಗಿ ಪರಿವರ್ತನೆ ಮಾಡಬೇಕಾದ ಸಂದರ್ಭದಲ್ಲಿ ರಸ್ತೆ ಮಧ್ಯ ರೇಖೆಯಿಂದ ಎಡ ಭಾಗಕ್ಕೆ ಮತ್ತು ಬಲ ಭಾಗಕ್ಕೆ right of way ಕನಿಷ್ಠ 40 ಮೀಟರ್ ಇರಬೇಕಾಗುತ್ತದೆ. ಹೀಗೆ ಎರಡು ಜಿಲ್ಲಾ ಕೇಂದ್ರಗಳ ಸಂಪರ್ಕ ರಸ್ತೆಯಾಗಿರಬೇಕು. ಈ ರೀತಿ ಅದಕ್ಕೆ ಕೆಲವೊಂದು ಮಾನದಂಡಗಳಿಗನುಗುಣವಾಗಿ ರಸ್ತೆಯನ್ನು ಮೇಲ್ದರ್ಜೆಗೇರಿಸಬೇಕಾದಾಗ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಮತ್ತು approach ರಸ್ತೆಗಳನ್ನು ಏನು ಮಾಡಬೇಕಾಗಿದೆ, ಅದನ್ನು ಮಾಡಿ ರಸ್ತೆ ಓಡಾಡಕ್ಕೆ ಅನುಕೂಲ ಮಾಡಿಸಿಕೊಡುವ ಕೆಲಸವನ್ನು ಮಾಡಿಸುತ್ತೇವೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಶ್ರೀಕಾಂತ ಎಸ್. ಕುಲಕರ್ಣಿ : ಇದನ್ನು KRDCL ಮೂಲಕ ತಾವು ಸಮಿತಿಯಲ್ಲಿ ಚರ್ಚಿಸಿ, ಅದು ಕಾರ್ಯರೂಪಕ್ಕೆ ಬರಬೇಕಾದರೆ ಸಮಯ ತೆಗೆದುಕೊಳ್ಳುತ್ತದೆ. ಬ್ರಿಡ್ಜ್ ಕಟ್ಟಿದ ಉದ್ದೇಶ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದಾಗಿ. ಆದ್ದರಿಂದ ಮಾರ್ಚ್, ಏಪ್ರಿಲ್ ತಿಂಗಳಿನೊಳಗೆ ಈ ರಸ್ತೆ ನಿರ್ಮಾಣವಾಗಬೇಕೆಂಬ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳು ಕನಿಷ್ಠ ನಾಲ್ಕೈದು ಕೋಟಿ ರೂ.ಗಳನ್ನು ತಕ್ಷಣ ಮಂಜೂರು ಮಾಡಿ ಜಮಖಂಡಿಯಿಂದ ಸಾವಳಗಿಯವರೆಗೆ 18 ಕಿ.ಮೀ. ರಸ್ತೆ ಕೆಟ್ಟು ಹೋಗಿದೆ. ಇದನ್ನು ತಾತ್ಪೂರ್ತಿಕವಾಗಿ ದುರಸ್ತಿಗೊಳಿಸಿ ವಾಹನಗಳ ಓಡಾಟಕ್ಕೆ ಅನುಕೂಲ ಮಾಡಿಕೊಟ್ಟರೆ ಸರ್ಕಾರ ಸೇತುವೆ ಕಟ್ಟಿದ್ದು ಸಾರ್ವಜನಿಕರಿಗೆ ಉಪಯೋಗವಾಗುತ್ತದೆ ಎಂಬ ಮಾತನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಸಿ.ಎಂ. ಉದಾಸಿ : ವಾಹನ ಸಂಚಾರಕ್ಕೆ ಬೇಕಾದಷ್ಟು ಹಣಕಾಸನ್ನು ಇಲಾಖಾಧಿಕಾರಿಗಳ ಜೊತೆ ಚರ್ಚಿಸಿ ವಾಹನಗಳ ಸಂಚಾರಕ್ಕೆ

ಯೋಗ್ಯವಾಗುವಂತಹ ವ್ಯವಸ್ಥೆಯನ್ನು ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

12. ವಿಷಯ : ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆಗಳಲ್ಲಿ ಔಷಧಿ ಮತ್ತು disposal ಗಳನ್ನು ಮಾರುಕಟ್ಟೆ ಬೆಲೆಗಿಂತ ಹೆಚ್ಚು ನೀಡಿ ಖರೀದಿಸುತ್ತಿರುವ ಬಗ್ಗೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ನಿಮ್ಮ ಪ್ರಶ್ನೆಗೆ ಉತ್ತರ ನೀಡುವುದಕ್ಕೆ ಸಚಿವರು ಇಲ್ಲ.

ಶ್ರೀ ಸಿ.ಎಂ. ಉದಾಸಿ, ಲೋಕೋಪಯೋಗಿ ಸಚಿವರು, (ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಅವಶ್ಯಕ Drugs, HNS & Disposables ಗಳ ಸರಬರಾಜಿಗಾಗಿ ಸದರಿ ಆಸ್ಪತ್ರೆಯ ಅಧಿಸೂಚನೆ ಸಂಖ್ಯೆ: B&LCH/SUP/154/2012-13, ದಿನಾಂಕ 19.10.2012ರ ಮುಖಾಂತರ ಇ–ಟೆಂಡರ್ ಮೂಲಕ ಅಲ್ಪಾವಧಿ ಟೆಂಡರ್ (Short term tender) ಪ್ರಕಟಿಸಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯು ಇನ್ನೂ ಚಾಲ್ತಿಯಲ್ಲಿರುವುದರಿಂದ ಈ ಮೂಲಕ ಯಾವುದೇ ಔಷಧಿ ಮತ್ತು ಡಿಸ್ಪೋಸಬಲ್‌ಗಳನ್ನು ಖರೀದಿ ಮಾಡಿರುವುದಿಲ್ಲ ಮುಂದುವರಿದು, ಈ ಆಸ್ಪತ್ರೆಯ ಮಾತೃ ಸಂಸ್ಥೆಯಾದ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ದರಗುತ್ತಿಗೆ ಯಲ್ಲಿ ಇಲ್ಲದ ಹಾಗೂ ಈ ಆಸ್ಪತ್ರೆಯ ತುರ್ತು ವಿಭಾಗಗಳು, ಶಸ್ತ್ರ ಚಿಕಿತ್ಸಾ ವಿಭಾಗ, ICU, PICU, NICU ಹಾಗೂ ಇತ್ಯಾದಿಗಳ ದೈನಂದಿನ ರೋಗಿಗಳ ಚಿಕಿತ್ಸೆಯಲ್ಲಿ ಅವಶ್ಯಕವಾಗಿ ಬೇಕಾಗಿರುವ ಔಷಧಿ ಮತ್ತು ಡಿಸ್ಪೋಸಬಲ್‌ಗಳನ್ನು ಕೊಟೇಷನ್ ಮೂಲಕ ಆಸ್ಪತ್ರೆಯಲ್ಲಿ ನಡೆಯುವ ಖರೀದಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಖರೀದಿಸಲಾಗಿರುತ್ತದೆ. ಇವುಗಳನ್ನು ಪ್ರಚಲಿತ ಮಾರುಕಟ್ಟೆಯ ದರಗಿಂತ ಶೇ.15 ರಿಂದ 20 ರಷ್ಟು ಕಡಿಮೆ ದರದಲ್ಲಿ ಖರೀದಿ ಮಾಡಲಾಗಿರುತ್ತದೆ. ಈ